# ಟ್ವಿಟರ್ ಖಾತೆಯನ್ನು ಇನ್ನಷ್ಟು ಸುರಕ್ಷಿತಗೊಳಿಸುವುದು ಹೇಗೆ?

■ ಶಶಿಕುಮಾರ್ ಸಿ.



ಗಣ್ಯರು ಮತ್ತು ಸೆಲೆಬ್ರಿಟಿಗಳ ಸಾಮಾಜಿಕ ಜಾಲತಾಣಗಳ ಮೇಲೆ ಹ್ಯಾಕರ್ಸ್‌ಗಳ ಕಣ್ಣು ಮಿಕ್ಕೆಲ್ಲರಿಗಿಂತ ತುಸು ಹೆಚ್ಚೇ ಬಿದ್ದಿರುತ್ತದೆ. ಹಾಗಾಗಿಯೇ ಗಣ್ಯರ ಮತ್ತು ಸೆಲೆಬ್ರಿಟಿಗಳ ಸಾಮಾಜಿಕ ಜಾಲತಾಣಗಳು ಹೆಚ್ಚಾಗಿ ಹ್ಯಾಕ್ ಆಗುತ್ತವೆ. ಸಾಮಾಜಿಕ ಜಾಲತಾಣವಾದ ಟ್ವಿಟರ್ ಸಹ ಇದಕ್ಕೆ ಹೊರತಾಗಿಲ್ಲ. ಹ್ಯಾಕರ್‌ಗಳ ಕೈಚಳಕದಿಂದ ಪ್ರಧಾನಿ ಅವರ ಟ್ವಿಟರ್ ಖಾತೆಯೂ ಹೊರತಾಗಿಲ್ಲ.

ಟ್ವಿಟರ್ ಖಾತೆ ಮತ್ತು ಫೇಸ್‌ಬುಕ್, ಇತರ ಸಾಮಾಜಿಕ ತಾಣಗಳ ಖಾತೆ ಮತ್ತು ವೆಬ್‌ಸೈಟ್ ಮೇಲೆ ಹ್ಯಾಕರ್‌ಗಳ ಕಣ್ಣು ಆಗಾಗ ಬೀಳುತ್ತಲೇ ಇರುತ್ತದೆ. ಅಕೌಂಟ್ ಹ್ಯಾಕ್ ಮಾಡಿ ಹಣ ಕೇಳುವುದು, ಅಶ್ಲೀಲ, ಅಸಂಬದ್ಧ ಪೋಸ್ಟ್ ಮಾಡಿ ಖಾತೆದಾರರ ಗೌರವಕ್ಕೆ ಧಕ್ಕೆ ತರುವುದು ಮತ್ತು ಸೈಬರ್ ಅಪರಾಧ ಕೃತ್ಯ ಎಸಗುವುದು ಹ್ಯಾಕರ್ಸ್‌ಗಳ ಕೆಲಸ.

ಹೀಗಾಗಿ ಟ್ವಿಟರ್ ಸೇರಿದಂತೆ ಯಾವುದೇ ರೀತಿಯ ಸಾಮಾಜಿಕ ಜಾಲತಾಣದಲ್ಲಿನ ಖಾತೆಯನ್ನು ಎರಡು ಹಂತದ ಭದ್ರತಾ ವೈಶಿಷ್ಟ್ಯ ಬಳಸಿ ಇನ್ನಷ್ಟು ಸ್ಟ್ರಾಂಗ್ ಮಾಡುವುದು ಒಳಿತು.

## ಸ್ಟ್ರಾಂಗ್ ಮಾಡುವುದು ಹೇಗೆ?

'ಟೂ ಫ್ಯಾಕ್ಟರ್ ಅಥೆಂಟಿಕೇಷನ್' ಅನ್ನು ಸಕ್ರಿಯಗೊಳಿಸುವುದರಿಂದ ನಮ್ಮ ಖಾತೆಗೆ ಹೆಚ್ಚುವರಿ ಭದ್ರತೆಯನ್ನು ಒದಗಿಸಿದಂತಾಗುತ್ತದೆ. ನಮ್ಮದಲ್ಲದ ಅಥವಾ ಹೆಚ್ಚುವರಿ ಡಿವೈಸ್‌ನಿಂದ ಟ್ವಿಟರ್ ಲಾಗಿನ್ ಆಗುವಾಗ ಈ ಫೀಚರ್ ಹೆಚ್ಚು ಸಹಕಾರಿ. ಈ ಫೀಚರ್ ಅನ್ನು ಆನ್ ಮಾಡುವುದು ಬಲು ಸುಲಭ. ಟ್ವಿಟರ್ ಖಾತೆಯಲ್ಲಿ ಕಾಣುವ ಮೋರ್ ಸೆಟ್ಟಿಂಗ್ಸ್‌ಗೆ ಹೋಗಿ ಅಲ್ಲಿ ಕಾಣುವ ಪ್ರೈವೆಸಿ ಆಯ್ಕೆಯನ್ನು ಕ್ಲಿಕ್ ಮಾಡಬೇಕು. ನಂತರ ಅಕೌಂಟ್ ಸೆಟ್ಟಿಂಗ್ಸ್ ಮೇಲೆ ಕ್ಲಿಕ್ ಮಾಡಿದರೆ ಸೆಕ್ಯುರಿಟಿ ಎಂಬ ಮತ್ತೊಂದು ಆಯ್ಕೆ ಕಾಣಿಸುತ್ತದೆ. ಅದನ್ನು ಒತ್ತಿದರೆ ಟೂ ಫ್ಯಾಕ್ಟರ್ ಅಥೆಂಟಿಕೇಷನ್ ಫೀಚರ್ ಲಭ್ಯವಾಗುತ್ತದೆ. ಅದನ್ನು ಆನ್ ಮಾಡಬೇಕು.

## ಲಾಗಿನ್ ವೆರಿಫಿಕೇಷನ್

ಪಾಸ್‌ವರ್ಡ್ ಮಾತ್ರವಲ್ಲದೆ, ಅದರ ಜತೆಗಿನ ಲಾಗಿನ್ ವೆರಿಫಿಕೇಷನ್ ಅನ್ನೂ ಅನೇಬಲ್ ಮಾಡಬೇಕು. ಬಳಕೆದಾರರೊಬ್ಬರಿಗೆ ಮಾತ್ರ ಟ್ವಿಟರ್ ಖಾತೆಯನ್ನು ಅಕ್ಸೆಸ್ ಮಾಡಲು ಸಹಕಾರ ನೀಡುವ ಭದ್ರತಾ ವೈಶಿಷ್ಟ್ಯವಿದು. ಪಾಸ್‌ವರ್ಡ್ ಮತ್ತು ಮೊಬೈಲ್ ಫೋನ್ ಇದ್ದರೆ ಮಾತ್ರ ಲಾಗಿನ್ ಮಾಡಲು ಸಾಧ್ಯವಾಗುತ್ತದೆ.

ಇದರ ಜೊತೆಗೆ ಅಪ್ಲಿಕೇಷನ್ ಮತ್ತು ಬ್ರೌಸರ್ ಅನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡಿಕೊಳ್ಳಬೇಕು. ಹೊಸ ಅಪ್‌ಡೇಟ್‌ನಿಂದಾಗಿ ಕಾಲಕಾಲಕ್ಕೆ ಭದ್ರತಾ ಮತ್ತು ಸುರಕ್ಷತಾ ಅಂಶಗಳು ಲಭ್ಯವಾಗುತ್ತವೆ. ಹೀಗಾಗಿ ಅಪ್‌ಡೇಟ್ ಮಾಡುವುದು ಮುಖ್ಯ.

ಟ್ವಿಟರ್ ಖಾತೆಯ ಕುರಿತು ಬರುವ ಟ್ವಿಟರ್ ಕಂಪನಿಯ ಇ ಮೇಲ್‌ಗಳನ್ನು ಗಮನಿಸುತ್ತಲೇ ಇರಬೇಕು. ಈ ಮೇಲ್‌ಗಳ ಪೈಕಿ ಬಳಕೆದಾರರ ಖಾತೆಯ ಭದ್ರತೆಗೆ ಸಂಬಂಧಿಸಿದ ಮೇಲ್‌ಗಳೂ ಇರುತ್ತವೆ. ಹೀಗಾಗಿ ಮೇಲ್ ಪರಿಶೀಲನೆ ಕಾರ್ಯವನ್ನು ನಿರ್ಲಕ್ಷ್ಯ ಮಾಡಬಾರದು

ಕೊನೆಯದಾಗಿ, ಸುಲಭದ ಪಾಸ್‌ವರ್ಡ್ ಅನ್ನುವಯಾವುದೇ ಕಾರಣಕ್ಕೂ ರಚಿಸಬಾರದು. ಕನಿಷ್ಠ 10 ಅಂಕಿ ಇರುವ, ಸಂಖ್ಯೆ, ಸಂಕೇತ, ಅಕ್ಷರ ಇರುವ ಸಂಕೀರ್ಣ ಪಾಸ್‌ವರ್ಡ್ ಅನ್ನು ರಚಿಸುವುದು ಸೂಕ್ತ. ■

